E-mail to DAR

ಕರ್ನಾಟಕ ಸರ್ಕಾರ

ಸಂಖ್ಯೆ: ವಾಕೈ 96 ಜಕೈಯೋ 2015

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:06.02.2015

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ಬೆಂಗಳೂರು– 560 001.

ಇವರಿಗೆ:

ಜವಳಿ ಅಭಿವೃದ್ಧಿ ಆಯುಕ್ತರು,
ಕೈಮಗ್ಗ ಮತ್ತು ಜವಳಿ ಇಲಾಖೆ,
ಬೆಂಗಳೂರು.

ಮಾನ್ಯರೆ,

ವಿಷಯ: ನೇಕಾರರ ವಿಶೇಷ ಪ್ಯಾಕೇಜ್ ಯೋಜನೆ ಅಡಿ ಸೈಜಿಂಗ್ ಘಟಕ ಸ್ಥಾಪಿಸಲು ಅನುಸರಿಸುವ ಮಾರ್ಗಸೂಚಿ ಅನುಮೋದಿಸುವ ಬಗ್ಗೆ.

ಉಲ್ಲೇಖ:
1. ತಮ್ಮ ಪತ್ರ ಸಂಖ್ಯೆ:ಕೈಜಇ/ಜವಳಿ/ಜತ–2/ಸೈಜಿಂಗ್/2014–15, ದಿನಾಂಕ: 23.03.2014
2. ಸರ್ಕಾರದ ಮಾರ್ಗಸೂಚಿ ಸಂಖ್ಯೆ:ವಾಕೈ96 ಜಕೈಯೋ 2014 ದಿನಾಂಕ:31–01–2015

ಉಲ್ಲೇಖ 1ರ ಪತ್ರಗಳಲ್ಲಿ 2014–15ನೇ ಸಾಲಿನ ನೇಕಾರರ ವಿಷೇಶ ಪ್ಯಾಕೇಜ್ ಯೋಜನೆ ಅಡಿಯಲ್ಲಿ ಸೈಜಿಂಗ್ ಘಟಕ ಸ್ಥಾಪಿಸುವ ಕುರಿತು ಮಾರ್ಗಸೂಚಿ ಅನುಮೋದಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು ಉಲ್ಲೇಖ 2 ರಂತೆ ಸರ್ಕಾರದ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. ಸದರಿ ಮಾರ್ಗಸೂಚಿಯ ಇದರೊಂದಿಗೆ ಲಗ್ಗತ್ತಿಸಿ ತಮಗೆ ಕಳುಹಿಸುತ್ತಾ ಮಾರ್ಗಸೂಚಿಯನುಸಾರ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲು ಕೋರಲಾಗಿದೆ.

ತಮ್ಮ ನಂಬುಗೆಯ

(ಕೆ. ಬೋರಲಿಂಗಯ್ಯ)
ಉಪ ಕಾರ್ಯದರ್ಶಿ(ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

# ಕರ್ನಾಟಕ ಸರ್ಕಾರ

## ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಸೈಜಿಂಗ್ ಘಟಕ ಸ್ಥಾಪಿಸಲು ಅನುಸರಿಸುವ ಮಾರ್ಗಸೂಚಿಗಳು

ಸಂಖ್ಯೆ: ವಾಕೈ 96 ಜಕೈಯೋ 2014, ದಿನಾಂಕ: 31.01.2015

ರಾಜ್ಯದಲ್ಲಿ ವಿದ್ಯುತ್‌ಮಗ್ಗ ನೇಕಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಅವರ ವರಮಾನ ಮಟ್ಟವನ್ನು ಹೆಚ್ಚಿಸಲು ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಸೈಜಿಂಗ್ ಘಟಕ ಸ್ಥಾಪನೆ ಯೋಜನೆಯೂ ಸಹ ಒಳಗೊಂಡಿರುತ್ತದೆ. ಪ್ರಸ್ತುತ ರಾಜ್ಯದಲ್ಲಿ ಸೈಜಿಂಗ್ ಘಟಕಗಳು ಕಡಿಮೆ ಸಂಖ್ಯೆಯಲ್ಲಿ ಇದ್ದು, ರಾಜ್ಯದ ನೇಕಾರರು ಸೈಜಿಂಗ್‌ಗಾಗಿ ಹೊರ ರಾಜ್ಯವನ್ನು ಅವಲಂಬಿಸಬೇಕಾಗಿರುತ್ತದೆ. ಇದರಿಂದಾಗಿ ಬಟ್ಟೆ ಉತ್ಪಾದನಾ ವೆಚ್ಚವು ಜಾಸ್ತಿಯಾಗಲಿದ್ದು ಸಮಯವು ಸಹ ವ್ಯರ್ಥವಾಗುತ್ತದೆ. ಇದನ್ನು ಪರಿಶೀಲಿಸಿ ನೇಕಾರರಿಗೆ ಅನುಕೂಲವಾಗುವಂತೆ ಹಾಗೂ ಕಡಿಮೆ ವೆಚ್ಚದಲ್ಲಿ ಸೈಜಿಂಗ್ ಮಾಡಲಾದ ವಾರ್ಪ್ ಬೀಮ್‌ನ್ನು ಒದಗಿಸಲು ಈ ಯೋಜನೆಯಡಿ ಸೈಜಿಂಗ್ ಘಟಕ ಸ್ಥಾಪಿಸುವ ಎಸ್.ಪಿ.ವಿ/ಸಂಘ ಸಂಸ್ಥೆಗೆ ಸಹಾಯಧನವನ್ನು ನೀಡಲು ಪ್ರಥಮವಾಗಿ ಅವಕಾಶವಿರುತ್ತದೆ.

ರಾಜ್ಯದ ವಿದ್ಯುತ್‌ಮಗ್ಗ ನೇಕಾರರಿಗೆ ಉತ್ಪಾದನಾ ಚಟುವಟಿಕೆಗೆ ಹಾಗೂ ಅವರ ಅಭಿವೃದ್ಧಿಗೆ ಕಾಲಬದ್ಧವಾಗಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಹಾಗೂ ಯೋಜನೆಯಡಿ ಅನುದಾನ ಬಿಡುಗಡೆ ಮಾಡಲು ಅನುಸರಿಸಬೇಕಾದ ಕಾರ್ಯವಿಧಾನಗಳಿಗೆ ಮಾರ್ಗಸೂಚಿಯು ಈ ಕೆಳಗಿನಂತೆ ಹೊರಡಿಸಲಾಗಿದೆ.

**ಅರ್ಹತೆ:**

ಜವಳಿ ಕೈಗಾರಿಕೋದ್ಯಮಗಳು ನೋಂದಾಯಿಸಿದ ಎಸ್.ಪಿ.ವಿ/ಸಂಘ ಸಂಸ್ಥೆಯ ಮೂಲಕ ಈ ಮುಂದಿನ ಷರತ್ತುಗಳಿಗೊಳಪಟ್ಟು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅರ್ಹತೆಯಿರುತ್ತದೆ.

- ಸೈಜಿಂಗ್ ಘಟಕ ಸ್ಥಾಪಿಸಲು ಉದ್ದೇಶಿಸಿರುವ ಎಸ್.ಪಿ.ವಿ/ಸಂಘ ಸಂಸ್ಥೆಯವರು ಕನಿಷ್ಟ 01 ಎಕರೆ ಪ್ರದೇಶವನ್ನು ಹೊಂದಿದ್ದು ಸಂಸ್ಥೆಯ ಹೆಸರಿನಲ್ಲಿ ನೋಂದಣಿಯಾಗಿರತಕ್ಕದ್ದು.
- ಸೈಜಿಂಗ್ ಘಟಕ ಸ್ಥಾಪನೆಗೆ ಯೋಜನಾ ಮೊತ್ತದ ಶೇ.50ರಷ್ಟು (ಗರಿಷ್ಟ ಮಿತಿ ರೂ.300.00ಲಕ್ಷ) ಸರ್ಕಾರದ ಗರಿಷ್ಟ ಸಹಾಯಧನ ಒದಗಿಸಲಾಗುವುದು. ಹಾಗೂ ಶೇ. 50ರಷ್ಟು ಎಸ್.ಪಿ.ವಿ/ಸಂಘ ಸಂಸ್ಥೆ ಭರಿಸುವುದು. ಯೋಜನೆ ಅನುಷ್ಠಾನಕ್ಕಾಗಿ ತಗುಲುವ ಹೆಚ್ಚುವರಿ ವೆಚ್ಚವನ್ನು ಎಸ್.ಪಿ.ವಿ/ಸಂಘ ಸಂಸ್ಥೆಯೇ ಭರಿಸತಕ್ಕದ್ದು.
- ಸೈಜಿಂಗ್ ಘಟಕ ಸ್ಥಾಪಿಸಲು ಉದ್ದೇಶಿಸಿರುವ ಎಸ್.ಪಿ.ವಿ/ಸಂಘ ಸಂಸ್ಥೆಯವರು ಸೈಜಿಂಗ್ ಉದ್ದಿಮೆಯಲ್ಲಿ ಕನಿಷ್ಠ 03 ವರ್ಷ ಅನುಭವ ಹೊಂದಿರತಕ್ಕದ್ದು.

## ಯೋಜನಾ ಘಟಕಗಳು

- ಸೈಜಿಂಗ್ ಘಟಕ ಸ್ಥಾಪನೆಗೆ ಗುರುತಿಸಲಾದ ನಿವೇಶನದಲ್ಲಿ ರಸ್ತೆ, ಒಳಚರಂಡಿ, ನೀರು, ವಿದ್ಯುತ್ ಹಾಗೂ ಇತರೆ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಹೊಂದಿರತಕಕ್ಕದ್ದು.
- ಸೈಜಿಂಗ್ ಘಟಕ ಸ್ಥಾಪನೆಗೆ ಅವಶ್ಯವಿರುವ ಕಟ್ಟಡ ನಿರ್ಮಾಣ ಹೊಂದಿರತಕಕ್ಕದ್ದು.
- ಘಟಕ ಸ್ಥಾಪನೆಗೆ ಸೂಕ್ತವಾದ ಹಾಗೂ ಆಧುನಿಕ ಯಂತ್ರಗಳ ಅಳವಡಿಕೆ ಕೈಗೊಳ್ಳತಕ್ಕದ್ದು.
- ಘಟಕ ಕಾರ್ಯನಿರ್ವಹಣೆಗೆ ಸೂಕ್ತ ಸಿಬ್ಬಂದಿ ನೇಮಕ ಹೊಂದಿರತಕಕ್ಕದ್ದು.

## ಹಣಕಾಸಿನ ನೆರವು:

- ಸರ್ಕಾರದ ಸಹಾಯಧನ :- ಶೇ.50ರಷ್ಟು ನೀಡಲಾಗುವುದು.
- ಬ್ಯಾಂಕಿನ ಸಾಲ :- ಶೇ.35 ಪಡೆಯತಕ್ಕದ್ದು.
- ಸಂಸ್ಥೆಯ ವಂತಿಕೆ :- ಶೇ.15. (ಶೇ50ರಷ್ಟು ಸಂಸ್ಥೆಯೇ ಭರಿಸಲು ಸಾಮರ್ಥ್ಯವಿದ್ದರೆ ಭರಿಸಬಹುದು)

## ಸ್ಪೆಷಲ್ ಪರ್ಪಸ್ ವೆಹಿಕಲ್ (ಎಸ್.ಪಿ.ವಿ)/ಸಂಘ ಸಂಸ್ಥೆಯ ಪಾತ್ರ :

1. ಯೋಜನೆಯ ಅನುಷ್ಠಾನದ ಸಂಪೂರ್ಣ ಜವಾಬ್ದಾರಿ ಹಾಗೂ ಒ&ಎಮ್ ನಿರ್ವಹಣೆ ಎಸ್.ಪಿ.ವಿ.ಗೆ ಅನ್ವಯಿಸುವುದು.
2. ಯೋಜನೆಯ ಅನುಷ್ಠಾನಕ್ಕೆ ಅವಶ್ಯಕತೆ ಇರುವ ಭೂಮಿಯನ್ನು ಸೂಕ್ತ ದಾಖಲಾತಿಗಳೊಂದಿಗೆ ಎಸ್.ಪಿ.ವಿ.ಯು ಒದಗಿಸತಕ್ಕದ್ದು.
3. ಸರ್ಕಾರವು ಯೋಜನೆಗೆ ಆರ್ಥಿಕ ಸಹಾಯ ಒದಗಿಸಿ ಮಂಜೂರಾತಿ ನೀಡಿದ ಕೂಡಲೇ ಎಸ್.ಪಿ.ವಿ.ಯ ಆಡಳಿತ ಮಂಡಳಿಯಲ್ಲಿ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಯು ಸರ್ಕಾರದ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುವುದು.
4. ಯೋಜನೆ ಅನುಷ್ಠಾನದ ಹಂತ ಹಂತದಲ್ಲಿ ಕೆ.ಟಿ.ಟಿ.ಪಿ. ಆಕ್ಟ್‌ನಂತೆ ಕಾರ್ಯನಿರ್ವಹಿಸುವುದು.

## ಷರತ್ತು ಮತ್ತು ನಿಬಂಧನೆಗಳು:

1. ಈ ಯೋಜನೆಗೆ ಸಂಬಂಧಿಸಿದಂತೆ ಪ್ರಸ್ತಾವನೆಗಳನ್ನು ಜವಳಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಅಧಿಕಾರಿ ವರ್ಗ ಹಾಗೂ ಸೈಜಿಂಗ್ ವೃತ್ತಿಯಲ್ಲಿ ಅನುಭವವಿರುವ ತಾಂತ್ರಿಕ ಸಲಹೆಗಾರರನ್ನು ಒಳಗೊಂಡ ಸಮಿತಿ ರಚಿಸಿ, ಸಮಿತಿಯ ಸಭೆಯಲ್ಲಿ ಪ್ರಸ್ತಾವನೆಯ ಅರ್ಹತೆ, ಸಫಲತೆ ಬಗ್ಗೆ ತಾಂತ್ರಿಕವಾಗಿ ಪರಿಶೀಲಿಸಿ, ಅರ್ಹ ಪ್ರಸ್ತಾವನೆಯನ್ನು ಆಯ್ಕೆ ಮಾಡಿ, ಸರ್ಕಾರದ ಅನುಮೋದನೆ ಹಾಗೂ ಅನುದಾನ ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.
2. ಸಂಸ್ಥೆಯವರು 12 ತಿಂಗಳ ಅವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸತಕ್ಕದ್ದು.
3. ಅನುಷ್ಠಾನಕ್ಕೆ ಅವಶ್ಯವಿರುವ ವಿವಿಧ ಇಲಾಖೆಗಳ ಅನುಮತಿಗಳನ್ನು ಪಡೆದು ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.
4. ಕಟ್ಟಡ ಕಾಮಗಾರಿಗಳಿಗೆ ಸ್ಥಳೀಯ ಸಂಸ್ಥೆಗಳಿಂದ ನಿಯಮಾನುಸಾರ ಅನುಮೋದನೆ ಪಡೆಯತಕ್ಕದ್ದು.

5. ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರದಿಂದ ಮಂಜೂರು ಮಾಡಲಾದ ಅನುದಾನವನ್ನು ಮಂಜೂರಾದ ಉದ್ದೇಶಕ್ಕಷ್ಟೇ ಉಪಯೋಗಿಸತಕ್ಕದ್ದು.
6. ಅನುಮೋದಿತ ಯೋಜನಾ ವರದಿಯಂತೆಯೇ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.
7. ಯೋಜನಾ ಅನುಷ್ಠಾನದಲ್ಲಿ ಬದಲಾವಣೆಗಳಿದ್ದಲ್ಲಿ ಸರ್ಕಾರದ ಪೂರ್ವಾನುಮತಿಪಡೆದು ಅನುಷ್ಠಾನಗೊಳಿಸತಕ್ಕದ್ದು.
8. ಸರ್ಕಾರವು ನಿಗದಿಪಡಿಸುವ ನಮೂನೆಯಲ್ಲಿ ಷರತ್ತು ಮತ್ತು ನಿಬಂಧನೆಗಳ ಬಾಂಡ್‌ನ್ನು ನೀಡತಕ್ಕದ್ದು.
9. ತ್ಯಾಜ್ಯ ವಸ್ತು ನಿರ್ವಹಣೆಯನ್ನು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಸೂಚನೆಯಂತೆ ನಿರ್ವಹಿಸತಕ್ಕದ್ದು.
10. ನಿವೇಶನ ಅಭಿವೃದ್ಧಿ, ಕಟ್ಟಡ ನಿರ್ಮಾಣ, ಯಂತ್ರೋಪಕರಣ ಹಾಗೂ ಇತರೆ ಸಾಮಗ್ರಿಗಳ ಖರೀದಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ವನ್ನು ಪಾಲಿಸುವುದು. ಹಾಗೂ ಟೆಂಡರ್‌ಗಳಿಗೆ ಕೇಂದ್ರ ಕಛೇರಿಯಿಂದ ಅನುಮೋದನೆ ಪಡೆಯತಕ್ಕದ್ದು.
11. ಯೋಜನಾ ಅನುಷ್ಠಾನದ ಪ್ರತಿ ಹಂತದ ಆರ್ಥಿಕ ಹಾಗೂ ಭೌತಿಕ ಪ್ರಗತಿ ವರದಿಯನ್ನು ಪ್ರತಿ ಮಾಹೆಯ 5ನೇ ತಾರೀಖಿನೊಳಗಾಗಿ ಕೇಂದ್ರ ಕಛೇರಿಗೆ ಸಲ್ಲಿಸತಕ್ಕದ್ದು.
12. ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಗತಿಯನ್ನು ಪರಿಗಣಿಸಿ ಹಂತ ಹಂತವಾಗಿ ಹಣವನ್ನು ಬಿಡುಗಡೆ ಮಾಡುವುದು.
13. ಯಂತ್ರೋಪಕರಣಗಳ ಖರೀದಿ ಹಾಗೂ ಅಳವಡಿಕೆಗೆ ಸಂಬಂಧಿಸಿದಂತೆ ಹಂತ ಹಂತವಾಗಿ ಹಣ ಬಿಡುಗಡೆ ಮಾಡಲಾಗುವುದು.
14. ಈ ಯೋಜನೆ ಅಡಿಯಲ್ಲಿ ನಿರ್ಮಿಸುವ ಕಟ್ಟಡ ಹಾಗೂ ಯಂತ್ರೋಪಕರಣ ಮತ್ತು ನಿವೇಶನದ ಪ್ರಥಮ ಹಕ್ಕು ಕೈಮಗ್ಗ ಮತ್ತು ಜವಳಿ ಇಲಾಖೆಯದ್ದಾಗಿದ್ದು, ಎರಡನೇ ಹಕ್ಕು ಸಾಲ ಮಂಜೂರಾತಿ ನೀಡುವ ಹಣಕಾಸು ಸಂಸ್ಥೆಯದ್ದಾಗಿರುತ್ತದೆ.
15. ಈ ಯೋಜನೆಯಡಿ ಸ್ಥಾಪಿಸಲಾದ ಸೈಜಿಂಗ್ ಘಟಕವನ್ನು ಯಾವುದೇ ಕಾರಣಕ್ಕೂ ಸರ್ಕಾರದ ಪೂರ್ವಾನುಮತಿ ಇಲ್ಲದೇ ಮಾರಾಟ ಅಥವಾ ಪರಭಾರೆಯನ್ನು ಮಾಡತಕ್ಕದ್ದಲ್ಲ.
16. ಸೈಜಿಂಗ್ ಘಟಕದ ಒಟ್ಟು ಯೋಜನಾ ವೆಚ್ಚದಲ್ಲಿ ಎಸ್.ಪಿ.ವಿ./ಸಂಘ ಸಂಸ್ಥೆಯು ತನ್ನ ಪಾಲಿನ ವೆಚ್ಚವನ್ನು ಭರಿಸಿದ ನಂತರವೇ ವೆಚ್ಚದ ಅನುಪಾತಕ್ಕೆ ಸಮನಾಗಿ ಸರ್ಕಾರದ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

(ಕೆ.ಬೋರಲಿಂಗಯ್ಯ)
ಸರ್ಕಾರದ ಉಪಕಾರ್ಯದರ್ಶಿ(ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ